# ಕುವೆಂಪು ವಿಶ್ವವಿದ್ಯಾಲಯ

ಜ್ಞಾನಸಹ್ಯಾದ್ರಿ, ಶಂಕರಘಟ್ಟ–577451, ಶಿವಮೊಗ್ಗ ಜಿಲ್ಲೆ.

ಪರೀಕ್ಷಾಂಗ ವಿಭಾಗ


ದಿನಾಂಕ:22–07–2022ರಂದು ಕುಲಸಚಿವರು(ಮೌಲ್ಯಮಾಪನ)ರವರ ಕೊಠಡಿಯಲ್ಲಿ ನಡೆದ ಪರೀಕ್ಷಾ ವಿಭಾಗದ "ANSWER BOOKLETS WITH MULTIPLE LASER PRINTED BAR CODES AND OMR PRINTING"ಗೆ ಸಂಬಂಧಪಟ್ಟ ಟೆಂಡರ್ ಪರಿಶೀಲನಾ ಸಮಿತಿ ಸಭೆಯ ನಡಾವಳಿಗಳು.

ವಿಶ್ವವಿದ್ಯಾಲಯವು ಪರೀಕ್ಷಾ ವಿಭಾಗದ **"Answer Booklets with multiple laser printed bar codes and OMR printing"** ಗೆ ಸಂಬಂಧಪಟ್ಟಂತೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸರಬರಾಜು ಮಾಡಿಕೊಳ್ಳಲು No:KU/EB/SP-1/AB/895/2022-23/Date:18-05-2022 ರಲ್ಲಿ ಟೆಂಡರನ್ನು ಆಹ್ವಾನಿಸಲಾಗಿತ್ತು. ಆದರೆ ಟೆಂಡರ್‌ನಲ್ಲಿ ಒಂದೇ ಮುದ್ರಣ ಸಂಸ್ಥೆಯು ಭಾಗವಹಿಸಿದ್ದು, ಟೆಂಡರ್‌ನ ಪ್ರಥಮ ಕರೆಗೆ ಏಕ ಬಿಡ್‌ದಾರರನ್ನು ಪರಿಗಣಿಸಲು ನಿಯಮಾನುಸಾರ ಅವಕಾಶವಿಲ್ಲದೇವಿದ್ದುದರಿಂದ ಎರಡನೇ ಭಾರಿಗೆ No:KU/EB/SP-1 /AB/1644/2022-23/Date:23-06-2022 ರಲ್ಲಿ ಮರು ಟೆಂಡರನ್ನು ಆಹ್ವಾನಿಸಲಾಗಿತ್ತು. ಆದರೆ ಸದರಿ ಟೆಂಡರ್‌ನಲ್ಲೂ ಏಕ ಬಿಡ್‌ದಾರರು ಆರ್ಥಿಕ ಬಿಡ್‌ಗೆ ಅರ್ಹತೆ ಪಡೆದಿದ್ದು, ಟೆಂಡರ್‌ನ ದ್ವಿತೀಯ ಕರೆಗೂ ಏಕ ಬಿಡ್‌ದಾರರನ್ನು ಆರ್ಥಿಕ ಬಿಡ್‌ಗೆ ಪರಿಗಣಿಸಲು ನಿಯಮಾನುಸಾರ ಅವಕಾಶವಿಲ್ಲದೇವಿದ್ದುದರಿಂದ ಮೂರನೇ ಬಾರಿಗೆ No:KU/EB/SP-1 /AB/2328/2022-23/Date:06-07-2022 ರಲ್ಲಿ ಟೆಂಡರನ್ನು ಆಹ್ವಾನಿಸಲಾಗಿತ್ತು. ಸದರಿ ಟೆಂಡರ್‌ಗಳನ್ನು ಪರಿಶೀಲಿಸಲು ಮಾನ್ಯ ಕುಲಪತಿಯವರ ಅನುಮೋದನೆಯೊಂದಿಗೆ ಅಧಿಕೃತ ಜ್ಞಾಪನ ಸಂಖ್ಯೆ:KU/EB/SP-1/2278/2022-23/ Date:04-07-2022ರನುಸಾರ ರಚಿಸಲಾಗಿದ್ದ ಟೆಂಡರ್ ಪರಿಶೀಲನಾ ಸಮಿತಿಯು ದಿನಾಂಕ:20–07–2022ರಂದು ಅಪರಾಹ್ನ 11–00 ಗಂಟೆಗೆ ಕುಲಸಚಿವರು(ಮೌಲ್ಯಮಾಪನ)ರವರ ಕೊಠಡಿಯಲ್ಲಿ ಸಭೆ ಸೇರಿ ಟೆಂಡರ್‌ನ್ನು ಪರಿಶೀಲಿಸಿದ ಸಭಾ ನಡಾವಳಿಗಳು.

**ಹಾಜರಿದ್ದ ಸದಸ್ಯರು**

| | | |
|---|---|---|
| 1. ಕುಲಸಚಿವರು (ಪರೀಕ್ಷಾಂಗ) | | ಅಧ್ಯಕ್ಷರು |
| 2. ಶ್ರೀಮತಿ ಕಿರಣ್ ದೇಸಾಯಿ, ಸಿಂಡಿಕೇಟ್ ಸದಸ್ಯರು | - | ಸದಸ್ಯರು |
| 3. ಹಣಕಾಸು ಅಧಿಕಾರಿಗಳು | - | ಸದಸ್ಯರು |
| 4. ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ | - | ಸದಸ್ಯರು |
| 5. ನೋಡಲ್ ಅಧಿಕಾರಿಗಳು, ಇ–ಪ್ರೊಕ್ಯೂರ್‌ಮೆಂಟ್ | - | ಸದಸ್ಯರು |
| 6. ಉಪಕುಲಸಚಿವರು(ಪರೀಕ್ಷಾಂಗ,(ರೆಗ್ಯೂಲರ್)) | - | ಸಂಚಾಲಕರು |

ಆರಂಭದಲ್ಲಿ ಕುಲಸಚಿವರು(ಮೌಲ್ಯಮಾಪನ)ರವರು ಸಭೆಗೆ ಆಗಮಿಸಿದ್ದ ಸದಸ್ಯರನ್ನು ಸ್ವಾಗತಿಸಿದರು. ಈ ಪ್ರಕ್ರಿಯೆಯ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ 06 ಟೆಂಡರ್‌ಗಳು ಸ್ವೀಕೃತವಾಗಿರುತ್ತವೆ.

1. M/s XLICT Software Private Limited, Luchnow.
2. M/s Hitech Print Systems Limited, Bangalore.
3. M/s Datacon Technologies India Limited, Bangalore.
4. M/s Bindiya Enterprises, Gujarath.
5. Devharsh Infotech Private Limited, Mumbai.
6. Gemini Graphic Private Limited, Bidar.

ಮೇಲ್ಕಂಡ ಮುದ್ರಣ ಸಂಸ್ಥೆಗಳಲ್ಲಿ ಕ್ರ.ಸಂ. 06ರ ಮುದ್ರಣ ಸಂಸ್ಥೆಯು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನ ಪೋರ್ಟಲ್ ಹಂತದಲ್ಲಿಯೆ ಅನರ್ಹಗೊಂಡಿರುತ್ತದೆ.

ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಅರ್ಹಗೊಂಡಂತಹ ಐದು ಸಂಸ್ಥೆಗಳು ಸಲ್ಲಿಸಿದ್ದ ತಾಂತ್ರಿಕ ಬಿಡ್ (Technical Bi... ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಪಡೆದುಕೊಂಡು, ಅವುಗಳಲ್ಲಿರುವ ಮಾಹಿತಿಗಳನ್ನು ಮತ್ತು ಭೌತಿಕ ಪರಿಶೀ... ಸಲ್ಲಿಸಲಾಗಿದ್ದ ದಾಖಲಾತಿಗಳನ್ನು ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿದಾಗ ಕ್ರ.ಸಂ. 03 ಮತ್ತು 04ರ ಮುದ್ರಣ ಸಂಸ್ಥೆಗಳು ತಾಂತ್ರಿಕ ಬಿಡ್ (Technical Bid)ನ ಕೆಲವೊಂದು ಷರತ್ತುಗಳನ್ನು ಪೂರ್ಣ ಪ್ರಮಾಣದಲ್ಲಿ ಮತ್ತು ಸಮರ್ಪಕ ರೀತಿಯಲ್ಲಿ ಪೂರೈಸದಿರುವ ಹಿನ್ನೆಲೆಯಲ್ಲಿ ಸದರಿ ಬಿಡ್‌ದಾರರುಗಳನ್ನು ತಿರಸ್ಕೃತಗೊಳಿಸಲಾಯಿತು. ವಿವರ ಈ ಕೆಳಕಂಡಂತಿರುತ್ತದೆ.

**M/s Bindiya Enterprises, Gujarath.**

1. IBA ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ.

**M/s Datacon Technologies India Limited, Bangalore.**

1. 2021-22ನೇ ಸಾಲಿನ ಜಿ.ಎಸ್.ಟಿ. ವಿವರವನ್ನು ಸಲ್ಲಿಸಿರುವುದಿಲ್ಲ.
2. IBA ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ.

ಕ್ರ.ಸಂ. 01, 02 ಮತ್ತು 05ರ ಮುದ್ರಣ ಸಂಸ್ಥೆಗಳು ತಾಂತ್ರಿಕ ಬಿಡ್ (Technical Bid)ನ ಎಲ್ಲಾ ಷರತ್ತುಗಳನ್ನು ಪೂರ್ಣ ಪ್ರಮಾಣದಲ್ಲಿ ಪೂರೈಸಿರುವುದರಿಂದ ಆರ್ಥಿಕ ಬಿಡ್‌ಗೆ ಪರಿಗಣಿಸಲು ಸಮಿತಿಯು ತೀರ್ಮಾನಿಸಿರುತ್ತದೆ.

1. M/s XLICT Software Private Limited, Lucknow.
2. M/s Hitech Print Systems Limited, Bangaluru.
3. M/s Devharsh Infotech Private Limited, Mumbai.

ಇದೇ ದಿನ (ದಿನಾಂಕ:20-07-2022) ಅಪರಾಹ್ನ 03-00 ಗಂಟೆಗೆ ಕುಲಸಚಿವರು(ಮೌಲ್ಯಮಾಪನ)ರವರ ಕೊಠಡಿಯಲ್ಲಿ ಟೆಂಡರ್ ಪರಿಶೀಲನಾ ಸಮಿತಿಯು ಪುನಃ ಸಭೆ ಸೇರಿ ಟೆಂಡರ್‌ನ ತಾಂತ್ರಿಕ ಬಿಡ್ (Technical Bid)ನಲ್ಲಿ ಅರ್ಹತೆ ಹೊಂದಿರುವ ಮೂರು ಮುದ್ರಣ ಸಂಸ್ಥೆಗಳ ಆರ್ಥಿಕ ಬಿಡ್ (Financial Bid)ನ್ನು ತೆರೆಯಲು ತೀರ್ಮಾನಿಸಿ, ಆರ್ಥಿಕ ಬಿಡ್ (Financial Bid)ನ್ನು ತೆರೆದು ಪರಿಶೀಲಿಸಿತು. ಆರ್ಥಿಕ ಬಿಡ್‌ನ ವಿವರಗಳು ಕೆಳಕಂಡಂತಿರುತ್ತದೆ.

| Sl. No. | Bidder Name | Unit | Rate for Theory Answer Booklets (NEP) | Rate for Theory Answer Booklets (Non NEP) | Rate for Practical Answer Booklets/IA Booklets |
|---|---|---|---|---|---|
| 1 | M/s XLICT Software Private Limited, Luchnow. | 01 Script | 14.17 | 14.97 | 4.90 |
| 2 | M/s Hitech Print Systems Limited, Bangalore. | 01 Script | 13.95 | 19.89 | 4.86 |
| 3 | M/s Devharsh Infotech Private Limited, Mumbai. | 01 Script | 20.20 | 23.00 | 8.70 |

ಮೇಲ್ಕಂಡ ಮೂರು ಸಂಸ್ಥೆಗಳು ಪ್ರತಿ ಸೈದ್ಧಾಂತಿಕ ಮತ್ತು ಆಂತರಿಕ/ಪ್ರಾಯೋಗಿಕ ಪರೀಕ್ಷಾ ಉತ್ತರಪತ್ರಿಕೆಗಳ ಮುದ್ರಣ ವೆಚ್ಚಕ್ಕೆ ನಮೂದಿಸಿರುವ ದರಗಳನ್ನು ತುಲನಾತ್ಮಕವಾಗಿ ಪರಿಶೀಲಿಸಿದಾಗ M/s Hitech Print Systems Limited, ಇವರು ನಮೂದಿಸಿರುವ ದರಗಳಲ್ಲಿ **Theory Answer Booklets (NEP) & Practical Answer Booklets/IA Booklets** ಗಳಿಗೆ ನಮೂದಿಸಿರುವ ದರಗಳು ಉಳಿದ ಮುದ್ರಣ ಸಂಸ್ಥೆಗಳು ನಮೂದಿಸಿರುವ ದರಗಳಿಗಿಂತ ಕಡಿಮೆ ಇರುತ್ತದೆ. ಆದರೆ ಸದರಿ ಸಂಸ್ಥೆಯು **Theory Answer Booklets (Non NEP)** ಗಳಿಗೆ ನಮೂದಿಸಿರುವ ದರವು (ರೂ.19.89) M/s XLICT Software Private Limited, ಈ ಸಂಸ್ಥೆಯು ನಮೂದಿಸಿರುವ ದರಕ್ಕಿಂತ (14.97)ಹೆಚ್ಚಾಗಿರುವುದು ಕಂಡು ಬಂದಿರುತ್ತದೆ.

M/s Hitech Print Systems Limited, ಮುದ್ರಣ ಸಂಸ್ಥೆಯು ಮೂರು ವಿವಿಧ ಉತ್ತರಪತ್ರಿಕೆಗಳಲ್ಲಿ ಎರಡು ವಿವಿಧ ಉತ್ತರಪತ್ರಿಕೆಗಳಿಗೆ ನಮೂದಿಸಿರುವ ದರಗಳು ಉಳಿದ ಮುದ್ರಣ ಸಂಸ್ಥೆಗಳು ನಮೂದಿಸಿರುವ ದರಗಳಿಗಿಂತ ಕಡಿಮೆ ಇರುವುದರಿಂದ ಮತ್ತು ಟೆಂಡರ್‌ನಲ್ಲಿ ಐಟಂ ವಾರು (Item wise) ದರಗಳನ್ನು ಸೂಚಿಸುವಂತೆ ಬಿಡ್‌ದಾರರಿಗೆ ಸೂಚಿಸಿದ ಹಿನ್ನೆಲೆಯಲ್ಲಿ ಹೆಚ್ಚು ಐಟಂ (Item wise) ಗಳಿಗೆ ಕಡಿಮೆ ದರ ಸೂಚಿಸಿದ ಬಿಡ್‌ದಾರರನ್ನು L1 ಎಂದು ಪರಿಗಣಿಸಿ ಸದರಿ ಸಂಸ್ಥೆಗೆ ಮೊದಲ ಪ್ರಾಶಸ್ತ್ಯ ನೀಡಿ ದರ ಸಂಧಾನಕ್ಕೆ ಆಹ್ವಾನಿಸಿ, ದರ ಸಂಧಾನ ನಡೆಸಿ, **Theory Answer Booklets (Non NEP)** ಗಳಿಗೆ M/s XLICT Software Private Limited, ಸಂಸ್ಥೆಯವರು ನಮೂದಿಸಿರುವ ದರವನ್ನು ಒಪ್ಪಿ, ಆ ದರದಲ್ಲಿಯೆ **Theory Answer Booklets (Non NEP)** ಗಳನ್ನು ಸರಬರಾಜು ಮಾಡಲು ಒಪ್ಪಿಕೊಂಡಲ್ಲಿ ಮಾತ್ರ ಸದರಿ ಸಂಸ್ಥೆಯನ್ನು L1 ಆಗಿ ಪರಿಗಣಿಸಲು, ಒಂದು ವೇಳೆ ಸದರಿ ಸಂಸ್ಥೆಯವರು ದರ ಸಂಧಾನಕ್ಕೆ ಒಪ್ಪಿಕೊಳ್ಳದಿದ್ದಲ್ಲಿ, M/s XLICT Software Private Limited, ಸಂಸ್ಥೆಯವರನ್ನು ದರ ಸಂಧಾನಕ್ಕೆ ಆಹ್ವಾನಿಸಿ, M/s Hitech Print Systems Limited, ಇವರು **Theory Answer Booklets (NEP) & Practical Answer Booklets/IA Booklets** ಗಳಿಗೆ ನಮೂದಿಸಿರುವ ದರಗಳನ್ವಯದಂತೆ ಸದರಿ ಉತ್ತರಪತ್ರಿಕೆಗಳನ್ನು ಸರಬರಾಜು ಮಾಡಲು ಒಪ್ಪಿಕೊಂಡಲ್ಲಿ ಆ ಸಂಸ್ಥೆಯನ್ನೆ L1 ಆಗಿ ಪರಿಗಣಿಸಲು ಸಮಿತಿಯು ತೀರ್ಮಾನಿಸಿರುತ್ತದೆ.

ಮುಂದುವರೆದಂತೆ, ದಿನಾಂಕ: 22-07-2022 ರಂದು ಟೆಂಡರ್‌ನಲ್ಲಿ ಭಾಗಶಃ ಅರ್ಹತೆ ಪಡೆದಿರುವ M/s Hitech Print Systems Limited, ಸಂಸ್ಥೆಯವರನ್ನು ದರ ಸಂಧಾನಕ್ಕೆ ಆಹ್ವಾನಿಸಿದಾಗ ಸದರಿ ಸಂಸ್ಥೆಯ Assistant General Manager ಆದಂತಹ ಶ್ರೀ ನವಕುಮಾರ್ - ಇವರು ಆಗಮಿಸಿ ಟೆಂಡರ್ ಪರಿಶೀಲನಾ ಸಮಿತಿಯೊಂದಿಗೆ ದೀರ್ಘ ಸಮಾಲೋಚನೆ ನಡೆಸಿ ದರ ಸಂಧಾನಕ್ಕೆ ಒಪ್ಪಿ M/s XLICT Software Private Limited, ಸಂಸ್ಥೆಯವರು **Theory Answer Booklets (Non NEP)** ಗಳಿಗೆ ನಮೂದಿಸಿರುವ ದರಕ್ಕಿಂತ ಕಡಿಮೆ (14.95) ದರಕ್ಕೆ ಸರಬರಾಜು ಮಾಡುವುದಾಗಿ ಒಪ್ಪಿ ಪತ್ರ ಮುಖೇನ ಮೂರು ಉತ್ತರಪತ್ರಿಕೆಗಳ ದರಗಳನ್ನು ಸಂಧಾನದ ಒಪ್ಪಂದದಂತೆ ನಮೂದಿಸಿ ಸಲ್ಲಿಸಿರುತ್ತಾರೆ.

ಮುದ್ರಣ ಸಂಸ್ಥೆಯವರೊಂದಿಗೆ ಸಮಾಲೋಚನೆ ನಡೆಸಿ ಸೈದ್ಧಾಂತಿಕ ಮತ್ತು ಆಂತರಿಕ/ಪ್ರಾಯೋಗಿಕ ಪರೀಕ್ಷಾ ಉತ್ತರಪತ್ರಿಕೆಗಳ ದರಗಳನ್ನು ಪರಿಷ್ಕರಿಸಿ ಈ ಕೆಳಕಂಡಂತೆ ನಿಗದಿಪಡಿಸಲಾಯಿತು.

| Sl. No. | Bidder Name | Unit | Rate for Theory Answer Booklets (NEP) | Rate for Theory Answer Booklets (Non NEP) | Rate for Practical Answer Booklets/IA Booklets |
|---|---|---|---|---|---|
| 1 | Bid Quoted Price | 01 Script | 13.95 | 19.89 | 4.86 |
| 2 | Revised Negotiated Price | 01 Script | 13.95 | 14.95 | 4.86 |

ಸದರಿ ಸಂಸ್ಥೆಯು ಸೂಚಿಸಿದ ಈ ಮೇಲಿನ ದರ (ಸರಬರಾಜು ಹಾಗೂ ಜಿ.ಎಸ್.ಟಿ. ಎಲ್ಲಾ ಖರ್ಚುಗಳಗೊಂಡಂತೆ) ಸಮಾಲೋಚಿತ ಪರೀಷ್ಕೃತ ದರಗಳನ್ನು ಮಾನ್ಯ ಕುಲಪತಿಗಳ ಅನುಮೋದನೆಯೊಂದಿಗೆ ಅಂಗೀಕರಿಸಿ, ದರ ಒಪ್ಪಂದದ ಕರಾರನ್ನು ಒಂದು ವರ್ಷದ ಅವಧಿಗೆ ಮಾಡಿಕೊಳ್ಳಲು ಸಮಿತಿಯು ಒಮ್ಮತದಿಂದ ನಿರ್ಣಯಿಸಿತು.

ಅಂತಿಮವಾಗಿ ಉಪಕುಲಸಚಿವರು ಸಭೆಯ ಯಶಸ್ಸಿಗೆ ಸಹಕರಿಸಿದ ಅಧ್ಯಕ್ಷರು ಮತ್ತು ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನು ತಿಳಿಸಿದರು.

1. ಕುಲಸಚಿವರು(ಪರೀಕ್ಷಾಂಗ), - 20/7/22
2. ಶ್ರೀಮತಿ ಕಿರಣ್ ದೇಸಾಯಿ, ಸಿಂಡಿಕೇಟ್ ಸದಸ್ಯರು, -
3. ಹಣಕಾಸು ಅಧಿಕಾರಿಗಳು, -
4. ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, -
5. ನೋಡಲ್ ಅಧಿಕಾರಿಗಳು, ಇ-ಪ್ರೊಕ್ಯೂರ್‌ಮೆಂಟ್, -
6. ಉಪಕುಲಸಚಿವರು(ಪರೀಕ್ಷಾಂಗ) -